www.prepp.in



Prepp
Your Personal Exams Guide

01

# Karnataka Power Transmission Corporation Limited
## Departmental Examination – January, 2014
## SAS PART - I – PAPER - I
**(English/Kannada Precis Writing & Drafting)**
(Books, Guides, Notes etc. are not allowed)

**Date : 20.01.2014** **Maximum Marks:100** **Time: 9.30 am to 12.30pm**

## PART – A

1. **Write a precis of the following Passage in your words with a suitable title.** **25**

Environmentalists have raised their voices at several forums pleading a halt to any further use of nuclear power, in view of its dangers to the human race.

United States, reportedly having the maximum number of nuclear power stations, is in the forefront in this debate. An examination, conducted by the country's Environmental Protection Agency (EPA), of the waste drums containing nuclear waste somewhere in San Francisco led to some frightening discoveries.

Some of the drums had ruptured when they struck the sea. It was found that some creatures like giant sponges that had never lived there before had been found slowly and systematically breaking the drums open.

The EPA scientists made yet another spine-chilling discovery concerning the disposal of waste nuclear material in Zeatty, Nevada. In this sparsely populated town, people were found to be looting a nuclear waste dump and bringing home items like radioactive cement mix that produced a radioactive patio for one of its residents.

These two bizarre incidents help underscore a problem which some feel is assuming frightening dimensions. How to dispose of spent nuclear fuel? One of the main hazards of nuclear power is the radioactive waste from the reactors. They foul up the atmosphere, poison the earth and expose generations to lung cancer and other dreaded diseases.

In the United States plans are afoot to construct underground waste isolation facilities to store commercial radioactive waste products that will accumulate during the next two decades. The waste must be kept in storage for thousands of years to allow the radioactive elements to decay.

Radioactive wastes like Radium, Plutonium and Thorium have a very long span. Radium remains hazardous for 32,000 years. Plutonium for 5,00,000 years and Thorium for a million years. If this is so, where can such hazardous material be stored for so long-safe from leakage, pilferage and geological disturbances which might scatter it into the ground, water or into the atmosphere.

If nuclear waste leaks from tight iron cast drums it can easily get into underground water cycles and slowly find its way into vegetation, animals and ultimately to man. If the nuclear waste Strontium ever leaks and finds its way into vegetation and an animal like the cow happens to feed on it, then consumption of such milk by humans can lead to disastrous consequences.

The chemistry of Strontium is very similar to that of Calcium. It concentrates in the bones and in the long run one becomes prone to bone cancer.

www.prepp.in

Prepp
Your Personal Exams Guide



" Iodine can cause Thyroid cancer", says Dr.V.S.Venkataravaradan, a cosmic ray scientist at the Tata Institute of Fundamental Research (TIFR) now working with a team of scientists in an experiment abroad the NASA skylab mission.

He adds: "In the long run, even genetic mutations can occur." But, as Lord Keynes, father of modern economics says, "In the long run all of us are ultimately dead."

Accidents cannot be ruled out in a Nuclear Reactor with trouble consequences resulting for the population residing within even a one mile radius of the reactor. Nuclear plants are based on very high temperature gas cooled reactor systems where Uranium in the core is activated causing the atoms to fission or split releasing enormous heat and neutrons. These neutrons split adjacent atoms setting off a chain reaction that releases a tremendous amount of heat. The chain reaction, in the event of an accident, can go unchecked if the safety systems like the fuel rods which absorb the neutrons fail to activate themselves and fall into the reactor vessel.

An unchecked chain reaction can result in the explosion of the reactor vessel and the power station itself, releasing into the atmosphere radioactive substances which can spread to even distant places aided by the wind.

Take our own Tarapur reactor. If such an accident were to occur, atleast 100 kgs.of plutonium in the process of fission would be suddenly exposed to the atmosphere.

If one kg. of a plutonium powered device lost in the Nanda Devi would cause so much concern, with scientists warning of a "Leach Out", a process in which radioactive substances mix with water, what of the sudden exposure of a huge amount of plutonium to the atmosphere?

Scientists believe that if the plutonium powered device, reportedly planted by the CIA, is accidentally broken open by a curious villager, it can wipe out the entire village. The sudden exposure of an enormous quantity of plutonium in a metropolis can spell disaster.

But the protagonists of nuclear power dismiss these fears of an accident as unfounded and say such a possibility is a billion to one.

In this connection it will be interesting to note what the eminent scientist Dr.Ramanna, a former director of BARC has to say. He says that a dispassionate study of the advantages of atomic power has yet to be made, because in many countries there has been much over-heated public debate on the hazards of Nuclear Power, "some of which are not quite connected with either the economic or the safety aspects of the technology."

He cited the example of Oklo in Gabon where a natural reactor functioned for a period of 10,000 years to 5,00,000 years about 1,800 million years ago."It has been estimated that 6,000 kgs. of fission products and about 2,000 kgs. of plutonium were produced due to this underground natural water nuclear reactor.

Dr.Ramanna argues that all the fission products and plutonium seem to have remained at the same spot without ever diffusing into a water system. If nature could accomplish this without any special effort, mankind can certainly accomplish it with the help of all the available technology.

But scientists, even in the United States, concede that there is still no long term solution for waste disposal.

Yet another problem is the chance of man-made accidents in a Nuclear Power station. A news item generated much heat in both the houses of parliament. It related to the presence of a

Prepp Your Personal Exam Guide

www.prepp.in



Prepp
Your Personal Exams Guide

deranged man in the Tarapore Atomic Plant in 1969 allegedly causing damage to some installations.

Attacks have been committed in various atomic centres. None of these have so far resulted in the release of radioactivity into the environment. But it can and may happen in future.

Some of the major attacks on atomic centres are the discovery of a pipe bomb in the Illinois Institute of Technology Reactor,USA, a dynamite in the Point Beach Reactor,USA, two bombs in Stanford University Nuclear Accelerator USA, an attack by fifteen men on the Atucha. One Reactor in Argentina, discovery of an incendiary and four bombs in the Pilgrin. One Reactor Plymouth,USA. Fessenheim Reactor France and Monts D'Aree Reactor France.

2. **Read the following passage and answer the questions that follow.** **15**

The Artist co-operates with God in making increasingly larger numbers of people see the beauty of the world which these people could never see for themselves. The world is, of course, God's artistic masterpiece; but it is the artist who lends people eyes to see it with. Browning's Fra Lippo has the last word on the subject:

For, don't you mark, we're made so that we love
First when we see them painted, things we have passed
Perhaps a hundred times nor cared to see ?

In this sense, Oscar Wilde's paradox is perfectly true: that Nature imitates Art; for the majority of men see in Nature what Art has taught them to see in Nature. The fogs of London, said Wilde, were the invention of Whistler. To love beauty therefore becomes to the artist, as an artist, his first duty. To love beauty, that is, to see it for himself first, and then to communicate it to others; for love implies at once vision and reproduction. It must be the first article in an artist's creed, as an artist, that beauty is the best interpreter of God to man; that, when he has got hold of beauty, he has got hold of the surest key to the knowledge of God. Keats has said that Beauty is Truth. Now, this is not true. But to us here, Beauty is, as Plato said, the splendour of Truth. The artist, as an artist, must be content with the splendour and, through this splendour strive to convey the truth. He has no business with truth as such as the philosopher, for instance, has. He has no concern with conduct as such, as the moralist, for instance, has. It is not his function to exhort men to good works, or to prove things; but merely to exhibit them. Plato thought a picture, tor-instance, was just a copy of an object—a copy of the idea. It was Aristotle, Plato's pupil, who pointed out that, though a picture was in one sense certainly a copy and therefore something less than the object, in another sense it was something more than the object. It was, briefly, the idea of the object made visible to the eye. Art, therefore, does not consist merely in line and colour, sound and image; but primarily in ideas. Beauty may not be useful. Beauty may not improve our minds. But beauty must please. Indeed, such is the inherent delightfulness of beauty that, by its magic touch, not only the ugly becomes pleasurable, but even sorrow becomes a joy. That is the explanation of the pleasure we feel in tragedy. What would shock us in actual life gives us pleasure in a tragedy. For tragedy makes experience significant; and by making it significant, it makes it beautiful; and by making it beautiful, it makes it pleasant. And yet, it does not aim at pleasing; it only aims at exhibiting. Pleasure is not its aim; it is its effect.

**Questions:**

1) What does the artist do for most of us?
2) Why does the artist "lend" his eyes to people?
3) Explain: "Nature imitates Art."
4) What is the artist's first duty? Why?
5) What is the surest key to the knowledge of God? Why?
6) What is the artist's real function?
7) In what does Art primarily consist?
8) When does sorrow become a joy?

www.prepp.in



Prepp
Your Personal Exams Guide

3. **Write the following sentences in direct/indirect speeches.** **5**

   1) 'Call the first witness,' said the judge.
   2) He said. 'Alas ! I am undone.'
   3) I told him that I had not seen him for months.
   4) Abdul said that he had seen that picture.
   5) The boy said that he would go with us.

4. **Use the following words in your own sentences.** **5**

   1) no sooner
   2) as good as
   3) instead of
   4) assumption
   5) put forth

## PART –B

5. Draft a Circular from General Manager (Admin & HRD) to all Offices of HESCOM regarding implementation of Biometric Attendance Monitoring System. **5**

6. Draft a Notification from SEE(T&P), Corporate Office, CESC, inviting tenders for hiring of Data Entry services from Outsource Agencies. **5**

7. Draft an Inspection Report from Deputy Controller, O&M Circle, CESC, Mysore to Executive Engineer (Ele.), O&M Division, CESC, Mysore regarding anomalies identified during the inspection. **5**

8. During the monthly revenue review meeting of Hon'ble M.D. BESCOM has directed to gear up the revenue by taking necessary action at their end. In this regard draft a Circular from CEE, BESCOM, BRAZ to improve the revenue collection. **5**

9. Draft a Corporate Office Order from Director (A&HR), KPTCL, Kaveri Bhavan, Bangalore to all concerned regarding payment of sanctioning of D.A. at 6% w.e.f. from 01.07.2013 to all the employees of KPTCL and all ESCOMS. **5**

10. Draft a DO letter from Chief Engineer (Ele.), KPTCL, Bagalkot Zone, to Superintending Engineer (Ele.), W&M Circle, KPTCL Hubli duly calling for the explanation for delay in submission of Completion Reports in respect of works completed during 2012-13. **5**

11. Draft a circular from FA(A&R), KPTCL, Bangalore to all the concerned for timely submission of March Final Accounts 2014 along with related Annexures. **5**

12. Draft an Official Memorandum for sanctioning of Injury leave to Shri XYZ. Station Mechanic Grade II who met with electrical accident while on duty. **5**

13. Write an Inter-Office note from General Manager (Tech.), GESCOM to Executive Engineer (Ele.), PTC to furnish the details of pending power purchase bills as on 31.12.2013 as it is required for onward submission. **5**

14. Draft a letter from Hon'ble Managing Director, HESCOM to all the Zonal Chief Engineers and O&M Circle SEE (E), directing them to replace all MNR meters and to read the meters 100% without fail. **5**

Prepp Your Personal Exam Guide

www.prepp.in

Prepp
Your Personal Exams Guide



# ಕನ್ನಡ

## ಭಾಗ – ಎ

1. ಈ ಕೆಳಗಿನ ಲೇಖನವನ್ನು ಓದಿ 3 ನೇ ಒಂದರಷ್ಟಕ್ಕೆ ಸೀಮಿತಗೊಳಿಸಿ ಬರೆಯಿರಿ ಮತ್ತು ಸೂಕ್ತ ಶಿರೋನಾಮ ಬರೆಯಿರಿ: 25

ಯಶಸ್ಸಿನ ರಹಸ್ಯವಿರುವುದು ಏಕಾಗ್ರತೆಯಲ್ಲಿ ಎಂಬ ಸತ್ಯವನ್ನು ಅರಿತವರೇ ಜಾಣರು. ಈ ಏಕಾಗ್ರತೆ ಎಂಬುದು ಯೋಗಿಗಳಿಗೆ ಮಾತ್ರ ಅವಶ್ಯವಿರುವ ಸೊತ್ತು ಎಂದು ತಿಳಿಯುವುದು ಶುದ್ಧ ತಪ್ಪು. ಜೀವನದ ಪ್ರತಿಯೊಂದು ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುವ ಪ್ರತಿಯೋರ್ವರಿಗೂ ಈ ಏಕಾಗ್ರತೆ ಅತ್ಯಗತ್ಯ. ಕಮ್ಮಾರರಲ್ಲಿ, ಕ್ಷೌರಿಕರಲ್ಲಿ, ಬಡಗಿಗಳಲ್ಲಿ, ಅಕ್ಕಸಾಲಿಗರಲ್ಲಿ, ನೇಯ್ಗೆಯವರಲ್ಲಿ ಈ ಏಕಾಗ್ರತೆಯೆಂಬುದು ಸಹಜವಾಗಿಯೇ ರೂಢ ಮೂಲವಾಗಿರುವುದನ್ನು ಕಾಣಬಹುದು. ಕಮ್ಮಾರನ ಸುತ್ತಿಗೆ ಗುರಿ ತಪ್ಪಿದರೆ ಕೈ ಮುರಿದುಕೊಳ್ಳುವ ಸಂಭವ; ಕ್ಷೌರಿಕನ ಕತ್ತಿ ಸ್ವಲ್ಪ ಜಾರಿದರೂ ಚರ್ಮ ಕತ್ತರಿಸಿ ರಕ್ತ ಸುರಿಯುವ ಸಂಭವ; ಬಡಗಿಗೆ ತನ್ನ ಉಳಿಯ ಮೇಲೆ ಹಿಡಿತವಿಲ್ಲದಿದ್ದರೆ ಅವನ ಕಾಲ್ಬೆರಳಿಗೆ ಉಳಿಗಾಲವಿಲ್ಲ; ಅಕ್ಕಸಾಲಿಗಳ ಚಿನ್ನದ ಕೆಲಸವಂತೂ ಅತ್ಯಂತ ನಾಜೂಕಿನದು; ನೇಯ್ಗೆಯವರು ತಮ್ಮ ಲಾಳಿಗಳ ಮೇಲೆ ಸತತ ಕಣ್ಣಿಟ್ಟಿದ್ದರೆ ಮಾತ್ರ ಉತ್ತಮ ವಸ್ತ್ರಗಳು ಹೊರ ಬರಲು ಸಾಧ್ಯ.

ಆದರೆ ಇವರೆಲ್ಲರೂ ಪುಸ್ತಕಗಳನ್ನೋದಿಯೋ, ಭಾಷಣ ಕೇಳಿಯೋ ಏಕಾಗ್ರತೆಯನ್ನು ಅಭ್ಯಾಸ ಮಾಡಿದವರಲ್ಲ. ಪರಿಸ್ಥಿತಿಯ ಒತ್ತಡದಿಂದ ಇವರಿಗೆ ಏಕಾಗ್ರತೆ ಲಭಿಸಿದೆ. ಹಾಗಾದರೆ ಯಾವುದು ಆ ಪರಿಸ್ಥಿತಿ? ತಮ್ಮ ಕೈಕೆಲಸದಲ್ಲಿ ಸ್ವಲ್ಪ ಹೆಚ್ಚು ಕಡಿಮೆಯಾದರೂ ಅಪಘಾತ ಸಂಭವಿಸಬಹುದೆಂಬ ಪರಿಸ್ಥಿತಿ. ಇವರೆಲ್ಲ ತಮ್ಮ ಕೆಲಸ-ಕಾರ್ಯಗಳ ಅವಧಿಯಲ್ಲಿ ಅಪಾಯಗಳ ಅಂಚಿನಲ್ಲೇ ಇರುವವರು. ಆದ್ದರಿಂದ ಇವರು ತಮ್ಮ ಮನಸ್ಸನ್ನು ಬಿಗಿಹಿಡಿದುಕೊಂಡು ಅತ್ಯಂತ ಎಚ್ಚರಿಕೆಯಿಂದಲೇ ಕೆಲಸ ಮಾಡುತ್ತಿರಬೇಕು. ಈ ಮೂಲಕ ಇವರಿಗೆ ಒಂದು ಬಗೆಯ ಏಕಾಗ್ರತೆ – ಇವರ ವೃತ್ತಿಗೆ ಸಂಬಂಧಪಟ್ಟ ಏಕಾಗ್ರತೆ ಸಿದ್ಧಿಸಿರುತ್ತದೆ. ಅಷ್ಟೇ ಅಲ್ಲ, ಈ ಬಗೆಯ ಏಕಾಗ್ರತೆ ವಂಶಪಾರಂಪಾರ್ಯವಾಗಿ ಹರಿದು ಬಂದ ಉದಾಹರಣೆಗಳೂ ಹೇರಳವಾಗಿವೆ. ಅದು ಹೇಗೆಂದರೆ ಕಬ್ಬಿಣದ ಕೆಲಸಗಳಿಗೆ ಸಂಬಂಧಿಸಿದ ವೃತ್ತಿ ಶಿಕ್ಷಣವನ್ನು ಪಡೆಯುವ ವಿದ್ಯಾರ್ಥಿಗಳಲ್ಲಿ ಕಮ್ಮಾರನ ಹುಡುಗ ಎಲ್ಲರಿಗಿಂತಲೂ ಹೆಚ್ಚು ಪ್ರಾವೀಣ್ಯ ತೋರಿಸುವುದು ಕಂಡುಬರುತ್ತದೆ. ಹಾಗೆಯೇ ಈ ಮಾತು ಇತರ ಎಲ್ಲ ವಿಷಯಗಳಿಗೂ ಅನ್ವಯಿಸುತ್ತದೆ. ಆದರೆ ಅಲ್ಲಲ್ಲಿ ಒಬ್ಬೊಬ್ಬರು ಹೊಸ ವಿಷಯದಲ್ಲೂ ನೈಪುಣ್ಯ ತೋರಬಹುದು. ಆದರದು ತುಂಬಾ ಅಪರೂಪ. ಇಲ್ಲಿಯವರೆಗೆ ನೋಡಿದ ಕೆಲವು ಅಂಶಗಳ ಆಧಾರದ ಮೇಲೆ ನಾವು ಇಷ್ಟನ್ನು ಸ್ಪಷ್ಟವಾಗಿ ತಿಳಿಯಬಹುದು, ಏನೆಂದರೆ ಸತತ ಅಭ್ಯಾಸದಿಂದ ಏಕಾಗ್ರತೆಯ ಸಿದ್ಧಿ.

ಏಕ ಎಂದರೆ ಒಂದು; ಅಗ್ರ ಎಂದರೆ ತುದಿ ಅಥವಾ ಮೊನೆ. ಆದ್ದರಿಂದ ಏಕಾಗ್ರತೆಯೆಂದರೆ ಒಮ್ಮುಖವಾಗಿರುವುದು ಅಥವಾ ಕೇಂದ್ರೀಕೃತವಾಗಿರುವುದು. ಮನಸ್ಸಿನ ಏಕಾಗ್ರತೆಯೆಂದರೆ ಮನಸ್ಸನ್ನು ಕೇಂದ್ರೀಕೃತಗೊಳಿಸುವುದು ಅಥವಾ ಒಮ್ಮುಖವಾಗಿಸುವುದು. ಹಾಗಾದರೆ ನಮ್ಮ ಮನಸ್ಸು ಈಗ ಕೇಂದ್ರೀಕೃತವಾಗಿಲ್ಲವೆ? ಎಂದು ಕೇಳಿದರೆ 'ಇಲ್ಲ' ಎಂದು ಹೇಳಬೇಕಾಗುತ್ತದೆ. ಏಕೆಂದರೆ, ಸ್ವಭಾವತಃ ಈ ಮನಸ್ಸು ಚಂಚಲ. ಜೊತೆಗೆ ನಮ್ಮ ಕಣ್ಣು, ಕಿವಿ, ಮೂಗು, ನಾಲಿಗೆ, ಚರ್ಮಗಳೆಂಬ ಪಂಚೇಂದ್ರಿಯಗಳ ಈ ಮನಸ್ಸನ್ನು ತಮ್ಮೆಡೆಗೆ ಸದಾ ಸೆಳೆಯುತ್ತಲೇ ಇರುತ್ತವೆ. ನಮ್ಮ ಐದು ಇಂದ್ರಿಯಗಳೂ ಬಹಳ ಪ್ರಬಲವಾದವುಗಳಾದ್ದರಿಂದ ನಮ್ಮ ಮನಸ್ಸು ಆ ಐದು ಕಡೆಗೂ ಹರಿದಾಡುತ್ತಲೇ ಇರುತ್ತದೆ. ಅಲ್ಲದೇ, ಈ ಮನಸ್ಸಿಗೆ ತನ್ನದೇ ಆದ ಬಗೆಬಗೆಯ ಆಸೆಗಳಿರುತ್ತವೆ. ಈ ಆಸೆಗಳಿಗೆ ಸೆಳೆಯುವ ಶಕ್ತಿಯಿದೆ. ಹೀಗೆ ಆಸೆಗಳ ಸೆಳೆತಗಳಿಗೆ ಇಂದ್ರಿಯಗಳ ಸಹಕಾರವೂ ಸಿಕ್ಕಿ ಈ ಬಡಪಾಯಿ ಮನಸ್ಸು ಕೋತಿಯಂತೆ ಕುಣಿದಾಡುತ್ತಿರುತ್ತದೆ. ಹೀಗೆ ಕುಣಿದಾಡುವ ಮನಸ್ಸಿನಲ್ಲಿ ಏಕಾಗ್ರತೆಯನ್ನು ನಿರೀಕ್ಷಿಸಲುಂಟೆ?

ನಮ್ಮ ಐದು ಇಂದ್ರಿಯಗಳೂ ಮನಸ್ಸನ್ನು ಎಳೆದಾಡುವಂಥವುಗಳಾದ್ದರಿಂದ ಅವುಗಳ ಮೇಲೂ ಕಾವಲಿನ ಕಣ್ಣಿಟ್ಟಿರಬೇಕಾಗುತ್ತದೆ. ಅವುಗಳು ಹೊತ್ತುಗೊತ್ತುಗಳಿಲ್ಲದೆ ಏನೇನನ್ನೋ ಕೇಳುತ್ತಿರುತ್ತವೆ. ಅವು ಎಷ್ಟಾದರೂ ನಮ್ಮ ಇಂದ್ರಿಯಗಳಲ್ಲವೆ ಎಂಬ ಮೋಹದಿಂದ ಅವು ಕೇಳಿದ್ದನ್ನು ಕೊಡುತ್ತ ಬಂದರೆ ಅವುಗಳ ಜೊತೆಯಲ್ಲೇ ಇರುವ ಮನಸ್ಸು ಈ ಮನಸ್ಸು ಮತ್ತೆ ಮಂಗನಂತಾಗುವುದು ಖಂಡಿತ. ಆದ್ದರಿಂದ ಮನಸ್ಸಿನ ಏಕಾಗ್ರತೆಯನ್ನು ಬಯಸುವವರು, ಇಂದ್ರಿಯಗಳು ಕೇಳಿದ್ದನ್ನೆಲ್ಲ ಕೊಟ್ಟು ಅತಿ ಮುದ್ದು ಮಾಡುವ ಅವಿವೇಕಕ್ಕೆ ಹೋಗಬಾರದು. ಒಟ್ಟಿನಲ್ಲಿ ಹತೋಟಿಯಲ್ಲಿಡದ ಇಂದ್ರಿಯಗಳು ಮನಸ್ಸಿನ ಏಕಾಗ್ರತೆಯನ್ನು ಧ್ವಂಸ ಮಾಡಿಬಿಡಬಲ್ಲವು ಎಂಬು ಕಟು ಸತ್ಯ ಎಷ್ಟು ಬೇಗ ತಿಳಿದರೆ ಅಷ್ಟು ಕ್ಷೇಮ.

www.prepp.in

Prepp
Your Personal Exams Guide



ಮನಸ್ಸಿನ ಏಕಾಗ್ರತೆಗೆ ಅಭ್ಯಾಸಬಲವೇ ಕಾರಣ ಎಂಬುದು ಇನ್ನೊಂದು ಬಹುಮುಖ್ಯ ಅಂಶ. ಅಭ್ಯಾಸ ಎಂದರೇನು? ಪುನಃ ಪುನಃ ಮಾಡುವ ಪ್ರಯತ್ನ. ಬರೆದೂ ಬರೆದೂ ಅಭ್ಯಾಸ ಮಾಡಿದರೆ ಬರವಣಿಗೆ ಅಂದವಾಗುತ್ತದೆ. ಓದೀ ಓದೀ ಅಭ್ಯಾಸ ಮಾಡಿದರೆ ಅಧ್ಯಯನ ಯಶಸ್ವಿಯಾಗುತ್ತದೆ. ಗುರಿಯಿಟ್ಟು ಗುಂಡು ಹೊಡೆಯಬೇಕಾದರೂ ಸೈನಿಕ ಅಭ್ಯಾಸ ಮಾಡಿರಬೇಕಾಗುತ್ತದೆ. ರುಚಿಯಾದ ಅಡುಗೆ ಮಾಡಬೇಕಾದರೂ ಗೃಹಿಣಿ ಅಭ್ಯಾಸ ಮಾಡಿರಬೇಕಾಗುತ್ತದೆ. ಅಭ್ಯಾಸದಿಂದ ಸಿದ್ಧಿ ಎಂಬ ಮಾತು ಎಲ್ಲ ಕಾಲಕ್ಕೂ ಸತ್ಯ. ಆದರೆ ಶ್ರದ್ಧೆಯಿಂದ ಅಭ್ಯಾಸ ಮಾಡಬೇಕು. ಉತ್ಸಾಹದಿಂದ ಅಭ್ಯಾಸ ಮಾಡಬೇಕು. ಬುದ್ಧಿ ಉಪಯೋಗಿಸಿ ಅಭ್ಯಾಸ ಮಾಡಬೇಕು. ಈ ಬಗೆಯ ಅಭ್ಯಾಸ ಮಾಡುತ್ತ ಹೋದರೆ ಏಕಾಗ್ರತೆ ಏಕೆ ಬರುವುದಿಲ್ಲ?

2. ಲೇಖನವನ್ನು ಓದಿ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ. 15

ಮಾನವನಿಗೆ ದೈವದತ್ತವಾದ ಆಸ್ತಿಗಳಲ್ಲಿ ಅವನಲ್ಲೇ ನೆಲೆಸಿರುವ ಆತ್ಮವಿಶ್ವಾಸವು ಬಹಳ ಅಮೂಲ್ಯವಾದ ಆಸ್ತಿ. ಇದನ್ನು ಬೆಳೆಸಿ ಪೋಷಿಸಿ ಉನ್ನತ ದಾರಿಯಲ್ಲಿ ಕೊಂಡೊಯ್ದರೆ, ಅದೂ ನಮ್ಮನ್ನು ಇನ್ನೂ ಉತ್ತಮ ಸ್ಥಿತಿಗೆ ಮುಟ್ಟಿಸುತ್ತದೆ.

ವಿಶ್ವಾಸ ಎಂಬ ಶಬ್ದಕ್ಕೆ ಅನೇಕ ಅರ್ಥಗಳುಂಟು. ನಂಬುಗೆ, ಪ್ರೀತಿ, ವಾತ್ಸಲ್ಯ, ಪ್ರಾಮಾಣಿಕತೆ ಎಲ್ಲವೂ ಅಡಗಿದೆ. ಈ ಶಬ್ದದಲ್ಲಿ, ಯಾರಿಗಾದರೂ ಯಾರಲ್ಲಾದರೂ ವಿಶ್ವಾಸವಿದೆ ಅಂದಾಗ, ಅವರಿಗೆ ಈ ಎಲ್ಲ ಭಾವನೆಗಳಿಗೂ ಉತ್ತರ ದೊರಕಿದೆ ಎಂದೇ ಅರ್ಥ ಒಂದು ಜವಾಬ್ದಾರಿಯಾದ ಕಾರ್ಯಭಾರವನ್ನು ವಹಿಸುವಾಗ, ಒಬ್ಬರಿಗೊಬ್ಬರಲ್ಲಿ ವಿಶ್ವಾಸವಿದ್ದರೆ ಮಾತ್ರ ಸಾಧ್ಯ. ಕಾರ್ಯಭಾರವನ್ನು ತೆಗೆದುಕೊಳ್ಳುವ ವ್ಯಕ್ತಿ ಹಿಂಜರಿಯಬಹುದು. ಆಗ ಕೊಡುವವ 'ಹೆದರಬೇಡ, ನೀನು ಇದನ್ನು ಮಾಡಲು ಖಂಡಿತಾ ಸಾಧ್ಯ. ನನಗೆ ನಿನ್ನಲ್ಲಿ ವಿಶ್ವಾಸವಿದೆ' ಎಂದು ಧೈರ್ಯ, ವಿಶ್ವಾಸವೆಲ್ಲವನ್ನು ತುಂಬುವುದು ತಿಳಿದಿಲ್ಲವೇ! ವಿಶ್ವಾಸಾರ್ಹನಾದ ವ್ಯಕ್ತಿ ಎಲ್ಲರಿಗೂ ಒಂದಲ್ಲ ಒಂದು ರೀತಿಯಲ್ಲಿ ಉಪಕಾರಿಯಾಗುತ್ತಾನೆ. ಎಲ್ಲರ ನಂಬಿಗೆಗೆ ಪಾತ್ರನಾಗಿ ತಾನೂ ಉಪಕೃತನಾಗುತ್ತಾನೆ. ವಿಶ್ವಾಸ ಘಾತುಕನಾದವನು ಎಲ್ಲೆಡೆಯಲ್ಲಿಯೂ ಎಲ್ಲರಿಂದಲೂ ತಿರಸ್ಕೃತನಾಗುತ್ತಾನೆ.

ಇಂತಹ ವಿಶ್ವಾಸ ಬೇರೆ ಬೇರೆಯವರಲ್ಲಿದ್ದರೆ ಇಷ್ಟೊಂದು ಅನುಕೂಲಗಳು ಇರುವಾಗ, ನಮ್ಮಲ್ಲಿ ನಮಗೆ ವಿಶ್ವಾಸವಿರಬೇಕಾದುದುದು ಬಹಳ ಮುಖ್ಯ. ಇದನ್ನೇ ಆತ್ಮವಿಶ್ವಾಸ ಎನ್ನುತ್ತಾರೆ. ಒಬ್ಬ ವ್ಯಕ್ತಿಗೆ ಆತ್ಮವಿಶ್ವಾಸವಿದ್ದರೆ ಸಾಕು ಏನೆಲ್ಲಾ ಸಾಧಿಸಬಲ್ಲ, ಏನೆಲ್ಲ ರೂಪಿಸಬಲ್ಲ. ಮೊಟ್ಟಮೊದಲು ತನ್ನ ಗುಣದಲ್ಲಿ ತನ್ನ ನಡತೆ, ಸ್ವಭಾವಗಳಲ್ಲಿ ತಾನೇ ಮೆಚ್ಚಿಕೊಳ್ಳುವಂತಹ ನಂಬಿಕೆಯಿರಬೇಕು. ಇದರ ತಳಹದಿಯ ಮೇಲೆ ತನ್ನ ಶಕ್ತಿ ಸಾಮರ್ಥ್ಯಗಳ ವಿಷಯದಲ್ಲಿ ನಂಬಿಕೆ ವಿಶ್ವಾಸ ಮೂಡುತ್ತದೆ. 'ನನ್ನಿಂದ ಇದು ಸಾಧ್ಯವೇ' ಎಂದು ಯೋಚಿಸುವುದು ಸರ್ವೇ ಸಾಮಾನ್ಯ, ಈ ಭಾವನೆಯನ್ನು ದಮನಮಾಡಿ– 'ನನ್ನಿಂದ ಇದು ಖಂಡಿತಾ ಸಾಧ್ಯ, ಯಾಕೆ ಸಾಧ್ಯವಿಲ್ಲ' ಎಂದು ಛಲ ಮಾಡಿದರೆ ಆ ಕಾರ್ಯ ಸಾಧಿತವಾಗುತ್ತದೆ.

ಆತ್ಮವಿಶ್ವಾಸವಿಲ್ಲದಿರುವವರು ಹೇಡಿಗಳು, ಸೋಮಾರಿಗಳು, ಧೈರ್ಯಗೇಡಿಗಳು 'ನನ್ನಿಂದ ಆಗೋದಿಲ್ಲ, ನಂಗೆ ಸಾಧ್ಯವಿಲ್ಲ' ಎಂಬ ಮಾತುಗಳೇ ಅವಿಶ್ವಾಸದ ಕುರುಹು. ಕೆಲವರಿಗೆ ಆತ್ಮವಿಶ್ವಾಸದ್ದೇ ಒಂದು ದೊಡ್ಡ ಅಭಾವ. ಇವರು ಬೇರೆಯವರನ್ನೂ ಧೈರ್ಯಗೆಡಿಸಲು ಸಮರ್ಥರಿರುತ್ತಾರೆ. ಆತ್ಮವಿಶ್ವಾಸವನ್ನು ಬೆಳೆಸಿಕೊಂಡು ಬೇರೆಯವರ ಆತ್ಮವಿಶ್ವಾಸವನ್ನೂ ಉತ್ತೇಜಿಸಿ ಬೆಳೆಸಲು ಸಹಕಾರಿಗಳಾಗಬೇಕು. ಹೆದರಿ ಹೇಡಿಗಳಾಗಿ ಕುಳಿತವರನ್ನು "ನೀನು ಇದನ್ನು ಸಾಧಿಸಲು ಸಾಧ್ಯ, ಏಳು, ಪ್ರಯತ್ನ ಮಾಡು ನೀನೇ ಮಾಡಬೇಕಾದ ಕಾರ್ಯ ಇದು" ಎಂದೆಲ್ಲಾ ಹುರಿದುಂಬಿಸಿದಾಗ ಅವರಿಗೆ ತಮ್ಮಲ್ಲಿಯೇ ನಂಬಿಕೆ ಹುಟ್ಟಿ ಆ ಕಾರ್ಯದಲ್ಲಿ ಸಫಲರಾಗುತ್ತಾರೆ. ಇದು ಗೆಲುವಿನ ಒಂದು ಹಂತ. ಒಮ್ಮೆ ಈ ಆತ್ಮವಿಶ್ವಾಸ ಎಚ್ಚೆತ್ತರೆ ಪ್ರಗತಿ ತಾನೇ ತಾನಾಗಿ ಬರುತ್ತದೆ. ಎಂತಹ ಹೇಡಿಗಳೂ ಪ್ರಗತಿಶೀಲರಾಗಲು ಪ್ರಯತ್ನಿಸುತ್ತಾರೆ.

ಆತ್ಮವಿಶ್ವಾಸವೊಂದಿದ್ದರೆ ಸಾಕು ಎಂತಹ ಕೆಲಸವನ್ನಾದರೂ ಸಾಧಿಸಬಹುದು. ಕೆಲಸವೂ ಸುಗಮವಾಗಿ, ಸುಸೂತ್ರವಾಗಿ ಸಾಂಗವಾಗಿ ನೆರವೇರುತ್ತದೆ. ಮಾನ್ಯ ಲಾಲ್ ಬಹದ್ದೂರ ಶಾಸ್ತ್ರಿಯವರು ಗಂಗಾ ನದಿಯನ್ನು ದಾಟಿದ್ದು, ಒಂದು ದಡದಿಂದ ಇನ್ನೊಂದು ದಡಕ್ಕೆ ಈಜಿಕೊಂಡು ಹೋಗಿದ್ದು ಅವರ ಆತ್ಮ ಬಲದ ಪ್ರಭಾವದಿಂದ. ಶ್ರೀ ಸ್ವಾಮಿ ವಿವೇಕಾನಂದರು ಕನ್ಯಾಕುಮಾರಿಯಲ್ಲಿ ಸಮುದ್ರದ ಮಧ್ಯೆ ಇರುವ ಬಂಡೆಗೆ ಈಜಿಕೊಂಡು ಹೋಗಲು ಸಾಧ್ಯವಾದುದು, ಈಜಬಲ್ಲೆ ಎಂಬ ಅವರ ಆತ್ಮವಿಶ್ವಾಸದಿಂದಲ್ಲವೇ! ಆತ್ಮ ವಿಶ್ವಾಸವನ್ನು ಬೆಳೆಸಿಕೊಂಡರೆ ಆತ್ಮಬಲವೂ ಬೆಳೆಯುತ್ತದೆ. ಈ ಆತ್ಮ ಬಲದಿಂದ ಏನನ್ನು ಬೇಕಾದರೂ ಎದುರಿಸಬಹುದು ಮತ್ತು ಜಯಿಸಬಹುದು.

ಆತ್ಮವಿಶ್ವಾಸವಿದ್ದವರು, ಮಾಡಬಾರದ ಕೆಲಸಗಳನ್ನು ಮಾಡುವವರನ್ನು ಖಂಡಿಸಬಹುದು, ಅಂಥವರನ್ನು ಎದುರಿಸಬಹುದು. ಇದು ಭಿನ್ನಾಭಿಪ್ರಾಯಗಳನ್ನು ಉಂಟುಮಾಡುವುದಾದರೂ ಒಳ್ಳೆಯ ಫಲವನ್ನು ಕೊಡುತ್ತವೆ ಎಂಬ ನಂಬಿಕೆಯಿಂದ ಮಾಡಿದಾಗ ಖಂಡಿತಾ ಉತ್ತಮ ಫಲ ದೊರೆಯುತ್ತದೆ. ಆತ್ಮವಿಶ್ವಾಸದ ಇನ್ನೊಂದು ಮುಖ ಧೈರ್ಯ, ಧೈರ್ಯದಿಂದ ಮುಂದುವರೆದಾಗ ಜಯ ಖಂಡಿತ. ಇಲ್ಲವಾದರೆ ಎಲ್ಲವೂ ಸ್ಥಗಿತಗೊಂಡು ಮೂಲೆಗೂಂಪಾಗುತ್ತದೆ. ಸಮಯ ಸಂದರ್ಭಕ್ಕನುಗುಣವಾಗಿ ಈ ಧೈರ್ಯವನ್ನು, ಈ ನಂಬಿಕೆಯನ್ನು ಉಪಯೋಗಿಸಬೇಕು. ವಾಹನವನ್ನು

Prepp Your Personal Exams Guide

www.prepp.in

Prepp
Your Personal Exams Guide



ನಡೆಸುವ ಆಸೆಯಿದ್ದರೆ ಮೊದಲು ಅದನ್ನು ಶ್ರದ್ಧೆಯಿಂದ ಕಲಿಯಬೇಕು. ನಂತರ ಕಲಿತವರ ಜೊತೆಯಲ್ಲಿದ್ದು ವಾಹನವನ್ನು ನಡೆಸಬೇಕು. ಈ ಎಲ್ಲಾ ಘಟ್ಟಗಳು ದಾಟಿದ ಮೇಲೆ ಧೈರ್ಯವಾಗಿ ಒಬ್ಬರೇ ನಡೆಸಬಹುದು. ಇದಕ್ಕೆ ಬದಲಾಗಿ ನನಗೆ ವಾಹನವನ್ನು ನಡೆಸುವ ರೀತಿ ಗೊತ್ತು. ಎಲ್ಲಾ ವಿಷಯಗಳೂ ತಿಳಿದಿದೆ. ನಾನೇ ನಡೆಸಬಲ್ಲೆ ಎಂದು ಹೊರಟರೆ ಅದು ದೊಡ್ಡ ತಪ್ಪಾಗುತ್ತದೆ. ಇದು ಹುಚ್ಚು ಆತ್ಮವಿಶ್ವಾಸ ಮತ್ತು ಮೀರಿದ್ದು ಕೂಡ. ಮಿತಿಮೀರಿದ ಆತ್ಮವಿಶ್ವಾಸವು ಒಳ್ಳೆಯದಲ್ಲ, ತನ್ನ ಯೋಗ್ಯತೆ ಮೀರಿ ಇನ್ನೊಬ್ಬನಿಗೆ ಸಹಾಯ ಮಾಡಲು ಮುಂದಾಗುವುದು, ಹಿಂದೆ ಮುಂದೆ ಯೋಚಿಸದೆ ಯಾವುದಕ್ಕಾದರೂ ಸರಿ ಎಂತಹ ಸಮಯದಲ್ಲಾದರೂ ಸರಿ ಮುನ್ನುಗ್ಗುವುದು ಇವೆಲ್ಲಾ ಪ್ರಮಾದಕರವಾದ ನಡತೆ. ಎಲ್ಲಕ್ಕೂ ಮಿತಿಯಿರಬೇಕು. ಇದನ್ನೇ ನಮ್ಮ ಹಿರಿಯರು ದುಡುಕು ಸ್ವಭಾವ ಎನ್ನುವುದು– ಆಗಾಗ ಕಿರಿಯರಿಗೆ, ದುಡುಕಬೇಡ, ಯೋಚಿಸಿ ಮಾಡು. ದುಡುಕಿದರೆ ಎಡವೀಯೆ ಎಂದು ಎಚ್ಚರಿಸುವುದು. ಯಾವುದೇ ಆಗಲಿ ಅತಿಯಾದರೆ ಒಳ್ಳೆಯದಲ್ಲ.

ವಿದ್ಯಾರ್ಥಿಗಳಲ್ಲಿ ಈ ಆತ್ಮವಿಶ್ವಾಸವಿರಬೇಕು. ಇದನ್ನು ಪೋಷಕರೂ, ಉಪಾಧ್ಯಾಯರೂ ಅವರಲ್ಲಿ ಇದನ್ನು ಬೆಳೆಸಿ ಪೋಷಿಸಬೇಕು. ಪ್ರತಿನಿತ್ಯ ಕಷ್ಟಪಟ್ಟು ಓದಲು ಹೇಳಬೇಕು. ಅವರು ಮಾಡಿದ ಕೆಲಸವನ್ನು ಪ್ರಶಂಸಿಸಿ, 'ಜಾಣ, ಎಷ್ಟು ಅಂದವಾಗಿ ಸರಿಯಾದ ಉತ್ತರ ಬರೆದಿದ್ದೀಯ. ಇನ್ನೂ ಉತ್ತಮವಾಗಿ ಮಾಡಬಲ್ಲೆ, ಪ್ರಯತ್ನ ಮಾಡು' ಎಂದು ಹುರಿದುಂಬಿಸಿ ಅವರಲ್ಲಿ ಆತ್ಮ ವಿಶ್ವಾಸವನ್ನು ರೂಪಿಸಬೇಕು. ಮೊದಲು ಸ್ವಲ್ಪ ಕಷ್ಟವಾದರೂ ಅಭ್ಯಾಸವಾದಂತೆಲ್ಲ ಸುಗಮವಾಗುತ್ತದೆ ಎಂದು ತಿಳಿ ಹೇಳಬೇಕು.

ಪರೀಕ್ಷೆಯ ಸಮಯದಲ್ಲಂತೂ ಪೋಷಕರು ಮಕ್ಕಳ ಬೆಂಗಾವಲಾಗಿ ನಿಂತು 'ನಿನ್ನ ಪ್ರಯತ್ನ ನೀನು ಮಾಡಿದ್ದೀಯ. ಚೆನ್ನಾಗಿ ಓದಿಕೊಂಡಿದ್ದೀಯ. ಪರೀಕ್ಷೆಯಲ್ಲಿ ಖಂಡಿತಾ ಚೆನ್ನಾಗಿ ಬರೆಯುತ್ತಿ, ಒಳ್ಳೆಯ ಅಂಕಗಳು ಬರುತ್ತದೆ, ಧೈರ್ಯವಾಗಿ ಹೋಗಿ ಬಾ' ಎಂದು ಉತ್ತೇಜಿಸಿದಾಗ ಅವರಿಗೆ ಆತ್ಮವಿಶ್ವಾಸದಿಂದ ಪರೀಕ್ಷೆಯಲ್ಲಿ ಫಲ ಸಿಗುತ್ತದೆ. ಆದರೆ ಕೆಲವು ಬಾರಿ ಮಕ್ಕಳು ಅನಾವಶ್ಯಕವಾಗಿ ಅತಿಯಾದ ಆತ್ಮವಿಶ್ವಾಸದಿಂದ ವರ್ತಿಸುವುದೂ ಉಂಟು. ಆಗ ಅವರಿಗೆ ಅದರ ಬಗ್ಗೆ ಎಚ್ಚರಿಕೆ ಕೊಡುತ್ತಿರಬೇಕು. ಪರೀಕ್ಷೆಯ ಸಮಯದಲ್ಲಿ, ನಿಧಾನವಾಗಿ ಯೋಚಿಸಿ ಉತ್ತರ ಬರೆಯುವಂತೆ ಹೇಳಿ ಅತಿಯಾದ ಆತ್ಮವಿಶ್ವಾಸ ಬೇಡವೆಂದು ಪರೋಕ್ಷವಾಗಿ (ಓವರ್ ಕಾನ್‌ಫಿಡೆನ್ಸ್) ಹೇಳಿ ಕಳಿಸಬೇಕು.

ಎಷ್ಟೋ ಬಾರಿ ಕ್ರೀಡಾಪಟುಗಳೂ ಸಹ ಹೆದರಿ ಹಿಂಜರಿದು ಕೂತು ಬಿಡುತ್ತಾರೆ. ಆಗ ಅಂಥವರಿಗೆ – 'ನೀನು ತುಂಬಾ ಚೆನ್ನಾಗಿ ಆಡುತ್ತೀಯೆ. ನಿನ್ನ ಸಾಮರ್ಥ್ಯ ನಿನಗೇ ಗೊತ್ತಿಲ್ಲ, ಹೋಗು, ನೀನೆ ಹೋಗಿ ಆಡಬೇಕು – ಹ್ಞಾ, ಚೆನ್ನಾಗಿ ಆಡು' ಎಂದು ಹುಮ್ಮಸ್ಸು ಕೊಟ್ಟು ಬೆನ್ನು ಚಪ್ಪರಿಸಿ ಕಳಿಸಬೇಕಾಗುತ್ತದೆ. ಆದರೂ ನಿಜವಾಗಿ ಫಲಕಾರಿಯಾದಾಗ ಆ ವ್ಯಕ್ತಿ ಉತ್ತೇಜಿತನಾಗಿ ಹೆಮ್ಮೆ ಧೈರ್ಯದಿಂದ ಮುಂದುವರೆದು ಪ್ರಗತಿ ಹೊಂದುತ್ತಾರೆ. ಅದೇ ಒಬ್ಬ ಉತ್ತಮ ಆಟಗಾರ ಮಿತಿಯಿಲ್ಲದ ಆತ್ಮವಿಶ್ವಾಸದಿಂದ ಸರಿಯಾದ ಆಟವನ್ನು ಆಡಲಾಗದೆ ಬಳಲುವುದೂ ಉಂಟು. ತಮಗೆ ತಾವೇ ಮೋಸ ಹೋಗುತ್ತಾರೆ. ಬೇರೆಯವರಿಂದ ಅವಮಾನಿತರಾಗುವ ಸಂಭವವೂ ಉಂಟು.

ಆತ್ಮವಿಶ್ವಾಸವುಳ್ಳವರು ಧೀರರು, ಇಲ್ಲದವರು ಹೇಡಿಗಳು. ಮಕ್ಕಳಿಗೆ ಎಳೆಯ ಕಂದನ ಅವಸ್ಥೆಯಿಂದಲೇ ಆತ್ಮವಿಶ್ವಾಸಕ್ಕೆ ಸಹಕರಿಸುತ್ತೇವೆ. ಬೋರಲಾದ ಮಗುವಿಗೆ, ಅನೇಕ ಬಣ್ಣ ಬಣ್ಣದ ಆಟದ ಸಾಮಾನುಗಳನ್ನು ತೋರಿಸಿ ಮುಂದೆ ಮುಂದೆ ಸರಿಯಲು ಕಲಿಸುವುದು. ಆ ಬಾಲ ಭಾಷೆಯಲ್ಲಿಯೇ 'ಬಾ ಮರಿ ತೊಗೋ, ತೊಗೋ, ಹ್ಞಾ, ಕೈ ಎತ್ತು, ಕಾಲೂರು' ಅಂತೆಲ್ಲಾ ಹೇಳಿ ಉಬ್ಬಿಸುತ್ತೇವೆ. ನಡಿಗೆ ಕಲಿಯುವಾಗಲಂತೂ ಅದನ್ನು ನಿಲ್ಲಿಸೋದು, 'ಬಾ, ಬಾ, ಪುಟ್ಟ ಪುಟ್ಟ ಹೆಜ್ಜೆ ಇಡು' ಅಷ್ಟರಲ್ಲಿ 'ಓ ಬಿದ್ದೀಯ, ಅಳ್ಬೇಡ, ಬಾ' ಅಂತೆಲ್ಲ ಹೇಳಿ, ಆತ್ಮವಿಶ್ವಾಸವನ್ನು ರೂಪಿಸಿ, ಉತ್ತೇಜಿಸಿ ಬೆಳೆಸ್ತೀವಿ. ಮಗು ಸ್ಫೂರ್ತಿಗೊಂಡು ಸರಸರಾಂತ ಸರಿಯುತ್ತಾ ಮುಂದೆ ಬಂದಾಗ – ದುಡುದುಡು ಅಂತ ನಡೆದುಬಂದಾಗ ಮನೆ ಮಂದಿಗೆಲ್ಲಾ ಎಂತಹ ಹಿಗ್ಗು – ಎಂತಹ ವಿಜಯ.

ಮುಂದೆ ಮಕ್ಕಳು ಬೆಳೆಯುತ್ತಾ, ಎಲ್ಲ ದಿಕ್ಕಿನಿಂದಲೂ ಈ ಭಾವನೆಗೆ ಪುಷ್ಟಿ ದೊರೆತು, ಪ್ರತಿವ್ಯಕ್ತಿಯಲ್ಲಿಯೂ ಆತ್ಮವಿಶ್ವಾಸ ಬೆಳೆದರೆ ಜಗತ್ತಿನಲ್ಲಿ ಹೇಡಿಗಳೇ ಇಲ್ಲದೇ, ಸೋಮಾರಿಗಳೇ ಇಲ್ಲದೆ, ಎಲ್ಲರೂ ಧೀರರಾಗಿ ಧೀಮಂತರಾಗಿ ಬಾಳಬಹುದು. ಎಲ್ಲ ಕಾರ್ಯಗಳೂ ಯಶಸ್ವಿಯಾಗಿ ಪ್ರಗತಿಪಥದತ್ತ ಸಾಗಬಹುದು. ಬಾಳಿದರೆ ಆತ್ಮವಿಶ್ವಾಸದಿಂದ ಬಾಳಬೇಕು ಎಂಬ ತತ್ವ ಮಹತ್ತರವಾದುದು ಇದನ್ನರಿತು, ಅನುಸರಿಸಿ ಬಾಳು ಭವ್ಯವಾಗುತ್ತದೆ.

ಪ್ರಶ್ನೆಗಳು :

1) ಆತ್ಮವಿಶ್ವಾಸ ಎಂದರೇನು?
2) "ಆತ್ಮವಿಶ್ವಾಸವೊಂದಿದ್ದರೆ ಸಾಕು ಎಂತಹ ಕೆಲಸವನ್ನಾದರೂ ಸಾಧಿಸಬಹುದು" ವಿವರಿಸಿ
3) ಹಿಂಜರಿಕೆ ಎಂದರೇನು? ವಿವರಿಸಿ
4) ಅತೀಯಾದ ಆತ್ಮವಿಶ್ವಾಸದ ಪರಿಣಾಮವೇನು?
5) ಆತ್ಮವಿಶ್ವಾಸ – ಧೈರ್ಯ ಇವುಗಳಿಗಿರುವ ಸಂಬಂಧವನ್ನು ವಿವರಿಸಿ.

www.prepp.in

Prepp
Your Personal Exams Guide



3. ಕೆಳಗಿನ ಪದಗಳನ್ನು ಉಪಯೋಗಿಸಿ ಸ್ವಂತ ವಾಕ್ಯಗಳಲ್ಲಿ ಬರೆಯಿರಿ. 5

1) ಕಾಲಿಗೆ ಬುದ್ಧಿ ಹೇಳು 2) ಕೈ ಚಳಕ 3) ನಖಶಿಖಾಂತ
4) ಓತ್ತಾಳೆ ಕಿವಿ 5) ಗಂಟಲು ಕಟ್ಟು

4. ಕೆಳಗಿನ ಪದಗಳಿಗೆ ತತ್ಸಮ-ತದ್ಭವ ಬರೆಯಿರಿ. 5

1) ಘಟಿಕಾ 2) ವಲ್ಲಿ 3) ಸಿರಿ
4) ಕಪಿಲೆ 5) ಶೃಂಗಾರ

## ಭಾಗ-ಬಿ

5. ಪ್ರಧಾನ ವ್ಯವಸ್ಥಾಪಕರು (ಆ ಮತ್ತು ಮಾ.ಸಂ.ಅ.) ರವರಿಂದ ಹೆಸ್ಕಾಂನ ಎಲ್ಲಾ ಕಛೇರಿಗಳಿಗೆ ಬಯೋಮೆಟ್ರಿಕ್ಸ್ ಹಾಜರಾತಿ ವ್ಯವಸ್ಥೆ ಅನುಷ್ಠಾನಗೊಳಿಸುವ ಕುರಿತು ಸುತ್ತೋಲೆಯ ಕರಡನ್ನು ತಯಾರಿಸಿ. 5

6. ಅಧೀಕ್ಷಕ ಇಂಜಿನೀಯರ್(ವಿ), ಟಿ&ಪಿ, ಸೆಸ್ಕ ರವರಿಂದ ಹೊರಗುತ್ತಿಗೆ ಏಜೆನ್ಸಿಗಳಿಂದ ಡೇಟಾ ಎಂಟ್ರಿ ಸೇವೆಗಳನ್ನು ಪಡೆಯುವ ಕುರಿತಾಗಿ ಟೆಂಡರ್ ಪ್ರಕ್ರಿಯೆಗಾಗಿ ಅಧಿಸೂಚನೆಯ ಕರಡನ್ನು ತಯಾರಿಸಿ. 5

7. ವಿಭಾಗೀಯ ಕಛೇರಿಯ ಪರಿಶೀಲನಾ ಸಮಯದಲ್ಲಿ ಗಮನಿಸಿದ ನ್ಯೂನ್ಯತೆಗಳ ಕುರಿತಾಗಿ ಉಪಲೆಕ್ಕನಿಯಂತ್ರಣಾಧಿಕಾರಿ, ಕಾ ಮತ್ತು ಪಾ ವೃತ್ತ, ಮೈಸೂರು, ಸೆಸ್ಕ ಇವರಿಂದ ಕಾರ್ಯನಿರ್ವಾಹಕ ಇಂಜಿನೀಯರ್ (ವಿ), ಕಾ ಮತ್ತು ಪಾ ವಿಭಾಗ, ಮೈಸೂರು, ಸೆಸ್ಕ ಇವರಿಗೆ ಪರಿಶೀಲನಾ ವರದಿಯನ್ನು ತಯಾರಿಸಿ. 5

8. ಮಾಸಿಕ ಕಂದಾಯ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಬೆಸ್ಕಾಂ ಇವರು ಕಂದಾಯವನ್ನು ಹೆಚ್ಚಿಸಲು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲು ಸೂಚಿಸಿರುತ್ತಾರೆ. ಈ ಕುರಿತಾಗಿ ಮುಖ್ಯ ಇಂಜಿನೀಯರ್ (ವಿ), ಬೆಂ.ಗ್ರಾ.ವ. ಕಛೇರಿ ಇವರಿಂದ ಕಂದಾಯವನ್ನು ಹೆಚ್ಚಿಸುವ ಕುರಿತಾಗಿ ಸುತ್ತೋಲೆಯನ್ನು ಹೊರಡಿಸಿ. 5

9. ನಿರ್ದೇಶಕರು (ಆ & ಮಾ.ಸಂ.), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು ರವರಿಂದ ಸಂಬಂಧಪಟ್ಟವರಿಗೆ ದಿನಾಂಕ 01.07.2013 ರಿಂದ ಜಾರಿಗೆ ಬರುವಂತೆ ಕವಿಪ್ರನಿನಿ/ಎಲ್ಲಾ ಎಸ್ಕಾಂಗಳ ಎಲ್ಲಾ ನೌಕರ/ಅಧಿಕಾರಿಗಳಿಗೆ 6% ತುಟ್ಟಿ ಭತ್ಯೆ ಮಂಜೂರು ಮಾಡುವ ಕುರಿತಾಗಿ ನಿಗಮದ ಆದೇಶದ ಕರಡನ್ನು ತಯಾರಿಸಿ. 5

10. 2012-13 ರಲ್ಲಿ ಪೂರ್ಣಗೊಂಡ ಕಾಮಗಾರಿಗಳಿಗೆ ಸಂಬಂಧಿಸಿದ ಸಮಾಪನ ವರದಿಗಳನ್ನು ತಡವಾಗಿ ಸಲ್ಲಿಸಿರುವ ಪ್ರಯುಕ್ತ ವಿವರಣೆ ಕೋರಿ ಮುಖ್ಯ ಇಂಜಿನೀಯರ್ (ವಿ), ಕವಿಪ್ರನಿನಿ ಬಾಗಲಕೋಟೆ ವಲಯ ರವರಿಂದ ಅಧೀಕ್ಷಕ ಇಂಜಿನೀಯರ್ (ವಿ), ಕಾಮಗಾರಿ ಮತ್ತು ನಿರ್ವಹಣೆ ವೃತ್ತ, ಕವಿಪ್ರನಿನಿ ಹುಬ್ಬಳ್ಳಿ ಇವರಿಗೆ ಅರೆ ಸರಕಾರಿ ಪತ್ರದ ಕರಡನ್ನು ತಯಾರಿಸಿ. 5

11. ಆರ್ಥಿಕ ಸಲಹೆಗಾರರು (ಲೆ&ಸಂ.), ಕವಿಪ್ರನಿನಿ, ಬೆಂಗಳೂರುರವರಿಂದ ಮಾರ್ಚ 2014 ರ ಅಂತಿಮ ಲೆಕ್ಕಪತ್ರಗಳನ್ನು ಎಲ್ಲಾ ಅನುಬಂಧಗಳೊಂದಿಗೆ ನಿಗದಿತ ದಿನಾಂಕದೊಳಗಾಗಿ ಸಲ್ಲಿಸುವ ಸುತ್ತೋಲೆಯ ಕರಡು ಪ್ರತಿಯನ್ನು ತಯಾರಿಸಿ. 5

12. ಕಾರ್ಯನಿರ್ವಹಿಸುವಾಗ ವಿದ್ಯುತ್ ಅಪಘಾತಕೀಡಾದ ಶ್ರೀ ಎಕ್ಸ್.ವಾಯ್.ಝಡ್, ಸ್ಟೇಶನ್ ಪರಿಚಾರಕ ದರ್ಜೆ-2 ರವರಿಗೆ ಅಪಘಾತ ರಜೆಯನ್ನು ಮಂಜೂರು ಮಾಡಿ ಅಧಿಕೃತ ಜ್ಞಾಪನಾ ಪತ್ರದ ಕರಡನ್ನು ತಯಾರಿಸಿ. 5

13. 31.12.2013 ಕ್ಕೆ ಬಾಕಿ ಇರುವ ವಿದ್ಯುತ್ ಖರೀದಿ ಬಿಲ್ಲುಗಳ ವಿವರಗಳನ್ನು ಮೇಲಾಧಿಕಾರಿಗಳಿಗೆ ಸಲ್ಲಿಸಲು ಬೇಕಾಗಿರುವುದರಿಂದ ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ), ಜೆಸ್ಕಾಂ ರವರಿಂದ ಕಾರ್ಯನಿರ್ವಾಹಕ ಇಂಜಿನೀಯರ್(ವಿ), ಪಿ.ಟಿ.ಸಿ. ರವರಿಗೆ ಸದರಿ ಮಾಹಿತಿಯ ಆಂತರಿಕ ಕಛೇರಿ ಟಿಪ್ಪಣಿಯನ್ನು ತಯಾರಿಸಿ. 5

14. ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಹುವಿಸಕಂನಿ ರವರಿಂದ ಎಲ್ಲಾ ಮುಖ್ಯ ಇಂಜಿನೀಯರ್‌ಗಳು ಹಾಗೂ ಎಲ್ಲಾ ಅಧೀಕ್ಷಕ ಇಂಜಿನೀಯರ್‌ಗಳಿಗೆ ತಮ್ಮ ವ್ಯಾಪ್ತಿಯಲ್ಲಿರುವ MNR ಮೀಟರ್‌ಗಳನ್ನು ಬದಲಾಯಿಸುವಂತೆ ಹಾಗೂ ಮೀಟರ್‌ಗಳನ್ನು ಪ್ರತಿಶತ 100 ರಷ್ಟು ಓದುವಂತೆ ಕ್ರಮ ತೆಗೆದುಕೊಳ್ಳಲು ನಿರ್ದೇಶಿಸಿ ಪತ್ರ ಬರೆಯಿರಿ. 5

* * * * * *